ಖಾಸಗಿ ತಾಂತ್ರಿಕ ಶಿಕ್ಷಣ ಶಾಲೆಗಳ ಬಗ್ಗೆ.

೧೬೬೧ ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸರ್ಕಾರದವರು ಅಧಿಕಾರಕ್ಕೆ ಬಂದ ನಂತರ (೧೯೮೩ ರಿಂದ) ಎಷ್ಟು ಖಾಸಗಿ ತಾಂತ್ರಿಕ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಲು ಪರವಾನಿಗಿ ಕೊಟ್ಟಿದ್ದಾರೆ (ಜಿಲ್ಲಾವಾರು ವಿವರಗಳನ್ನು ಕೊಡುವುದು);

ಆ) ಈ ಖಾಸಗಿ ತಾಂತ್ರಿಕ ಶಿಕ್ಷಣ ಶಾಲೆಗಳಲ್ಲಿ ಬಹುಭಾಗ ಸಲಕರಣೆಗಳಾಗಲಿ, ಶಿಕ್ಷಣಕ್ಕೆ ಬೇಕಾದ ಕೊಠಡಿಗಳು ಮಂತ್ರಿತರ ಸೌಲಭ್ಯಗಳಿಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ,

ಇ) ತಾಂತ್ರಿಕ ಶಿಕ್ಷಣದ ಹೆಸರಿನಲ್ಲಿ ಪೋಷಕರನ್ನು ವಿದ್ಯಾರ್ಥಿಗಳನ್ನು ಸಂಸ್ಥೆಯ ಆಡಳಿತ ವರ್ಗದವರು ಶೋಷಣೆ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಈ) ಖಾಸಗಿ ತಾಂತ್ರಿಕ ಶಿಕ್ಷಣ ಕಾಲೇಜುಗಳನ್ನು ಸರ್ಕಾರದವರು ವಹಿಸಿಕೊಂಡು ಉತ್ತಮವಾದ ಶಿಕ್ಷಣ ಕೊಡಲು ಕಾರ್ಯಕ್ರಮ ಕೈಗೊಳ್ಳುವರೆ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು)

ಅ) ವಿವರಗಳನ್ನು ಲಗತ್ತಿಸಲಾಗಿದೆ.

ಆ) ಬಂದಿದೆ.

ಇ) ರಾಜ್ಯದ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ದುಬಾರಿ ಶುಲ್ಕ ಹಾಗೂ ಪಂತಿಗೆ ಸಂಗ್ರಹ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಸರ್ಕಾರವು ವಹಿಸಿಕೊಳ್ಳಲು ಸಾಧ್ಯವಿಲ್ಲ.

೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬, ೧೯೮೬-೮೭ರ ಸಾಲಿನಲ್ಲಿ ಮಂಜೂರಾದ ಜಿಲ್ಲಾವಾರು ವಿವರಗಳು.

ಕ್ರಮ. ಸಂಖ್ಯೆ	ಜಿಲ್ಲೆಗಳು	೧೯೮೩–೮೪	೧೯೮೪–೮೫	೧೯೮೫-೮೬	೧೯೮೬–೮೭
೧	ಬೆಂಗಳೂರು	೩	೧	೮	೧೨
೨	ಧಾರವಾಡ	೨	೪	೧	೨
೩	ಬಳ್ಳಾರಿ	೧	–	೧	–
೪	ಬೀದರ್	೧	೧	–	೩
೫	ಬಿಜಾಪುರ	೩	೧	೧	೩
೬	ಚಿತ್ರದುರ್ಗ	೩	೧	೧	೪
೭	ಗುಲ್ಬರ್ಗ	೨	೩	೨	೩
೮	ಮೈಸೂರು	೨			೧
೯	ತುಮಕೂರು	೧	೧	೩	೩
೧೦	ರಾಯಚೂರು	೧	೨	೧	೧
೧೧	ಮಂಡ್ಯ				೧
೧೨	ಉತ್ತರ ಕನ್ನಡ	೨	೧	೧	೨

೧೩	ಬೆಳಗಾವಿ	೨	೩		೩
೧೪	ದಕ್ಷಿಣ ಕನ್ನಡ		೩	೧	೨
೧೫	ಶಿವಮೊಗ್ಗ		೩		
೧೬	ಹಾಸನ		೧		೨
೧೭	ಕೋಲಾರ	೧		೪	೦
೧೮	ಕೊಡಗು				೧
೧೯	ಚಿಕ್ಕಪಂಗಳೂರು		೧		೧
		೨೪	೨೬	೨೪	೪೫

ಮಹಾಲಕ್ಷ್ಮಿ ಬಡವಣೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ

೧೬೧೨. ಶ್ರೀ ಎಂ. ಎಸ್. ಕೃಷ್ಣನ್(ರಾಜಾಜಿನಗರ).—ಮಾನ್ಯ ಶಿಕ್ಷಣಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರದ ವಿಧಾನ ಸಭಾ ಕ್ಷೇತ್ರದಲ್ಲಿನ ಮಹಾಲಕ್ಷ್ಮಿ ಲೇಔಟ್ ಸರ್ಕಾರಿ ಪ್ರಾಥಮಿಕ ಶಾಲೆಯು ಒಂದು ಸಣ್ಣ ಬಾಡಿಗೆ ಮನೆಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸುಮಾರು ೫೦೦ ವಿದ್ಯಾರ್ಥಿಗಳು ಓದುತ್ತಿರುವುದರಿಂದ ಹತ್ತಿರದಲ್ಲೇ ಇರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿರುವ ನಿವೇಶನವನ್ನು (ಸಿಎ ಸೈಟು) ಈ ವಿದ್ಯಾ ಇಲಾಖೆಗೆ ಕೊಡಬೇಕೆಂದು ಶಾಸಕರು ಅಲ್ಲಿನ ನಿವಾಸಿಗಳು ಕೇಳಿ ಕೊಂಡಿಲ್ಲವೆ?

ಇ) ಈ ವಿಷಯದಲ್ಲಿ ಕಾಲವಿಳಂಬ ಮಾಡಲು ಕಾರಣವೇನು?

ಈ) ಬಿ. ಡಿ. ಎ. ಸುಪರ್ದಿನಲ್ಲಿರುವ ಸಿ. ಎ. ಸೈಟನ್ನು ಈ ಶಾಲೆಗೆ ಕೊಡುವಂತೆ ಸರ್ಕಾರದವರು ನಿರ್ಧಾರ ಕೈಗೊಳ್ಳುವರೆ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು)

ಅ) ಬಂದಿದೆ.

ಆ) ಹೌದು

ಇ) ಈ ವಿಷಯ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿ ಕಚೇರಿಗಳ ವ್ಯವಹಾರಗಳಲ್ಲಿರುವುದರಿಂದ ವಿಳಂಬಕ್ಕೆ ಕಾರಣವಾಗಿದೆ.

ಈ) ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರೊಡನೆ ಸಮಾಲೋಚನೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಕುಂದಾಪುರ ತಾಲ್ಲೂಕಿನ ಪ್ರಾಥಮಿಕ ಶಾಲೆಯ ಶಿಕ್ಷಕರ ನೇಮಕಾತಿ ಬಗ್ಗೆ

೭೭೪. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕಿನ ಮೊಳ್ಳಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು?

ಆ) ಮಂಜೂರಾದ ಅಧ್ಯಾಪಕರ ಸಂಖ್ಯೆ ಎಷ್ಟು, ಹಾಗೂ ಕೊರತೆ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು?

ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು)—

ಅ) ವಿದ್ಯಾರ್ಥಿಗಳು — ೧೧೩
ವಿದ್ಯಾರ್ಥಿನಿಯರು — ೧೧೭

ಒಟ್ಟು ೨೩೦

ಆ) ಮಂಜೂರಾದ ಅಧ್ಯಾಪಕರ ಸಂಖ್ಯೆ ೩. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕೊರತೆ ಇರುವ ಅಧ್ಯಾಪಕರ ಸಂಖ್ಯೆ ೨.

ಕುಂದಾಪುರ ತಾಲ್ಲೂಕಿನಲ್ಲಿ ಹೊಸದಾಗಿ ಪ್ರಾರಂಭವಾದ ಪ್ರಾಥಮಿಕ ಶಾಲೆಗೆ ಶಿಕ್ಷಕರ ಮಂಜೂರಾತಿ ಬಗ್ಗೆ

೭೭೩. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ)— ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೩ರಿಂದ ಈವರೆಗೂ ಕುಂದಾಪುರ ತಾಲ್ಲೂಕಿನಲ್ಲಿ ಮಂಜೂರಾದ ಹೊಸ ಶಾಲೆಗಳು ಎಷ್ಟು?

ಆ) ಸದರಿ ಹೊಸ ಶಾಲೆಗಳಿಗೆ ಮಂಜೂರಾದ ಅಧ್ಯಾಪಕರ ಸಂಖ್ಯೆ ಎಷ್ಟು?

ಇ) ಕೊರತೆ ಇದ್ದಲ್ಲಿ ಆದನ್ನು ಎಂದು ಸರಿಪಡಿಸ ಲಾಗುವುದು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ಮಂತ್ರಿಗಳು)

ಅ) ಎರಡು ಸರ್ಕಾರಿ ಪ್ರೌಢ ಶಾಲೆಗಳು ಮಾತ್ರ ಮಂಜೂರಾಗಿವೆ.

ಆ) ೧೯೮೪-೮೫ — ೨
೧೯೮೫-೮೬ — ೩
೧೯೮೬-೮೭ — ೧೦

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನ ಕಾವ್ರಾಡಿ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರ ನೇಮಕಾತಿ ಬಗ್ಗೆ

೭೭೪. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಕಾವ್ರಾಡಿ ಗ್ರಾಮದ ಕಾಡ್ಲೂರು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು?

ಆ) ಆ ಶಾಲೆಗೆ ಮಂಜೂರಾಗಿರುವ ಹಾಗೂ ಕೊರತೆ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು?

ಇ) ಕೊರತೆ ಇರುವ ಹಿಂದಿ ಅಧ್ಯಾಪಕರ ಹುದ್ದೆಗೆ ನೇಮಕಾತಿ ಆಗಿದೆಯೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು)—

ಅ) ವಿದ್ಯಾರ್ಥಿಗಳು — ೧೪೦
ಆ) ವಿದ್ಯಾರ್ಥಿನಿಯರು — ೧೨೫

ಒಟ್ಟು ೨೬೫